# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 'ರಾಜ್ಯ ವಿಪತ್ತು ಸ್ಪಂದನಾ ಪಡೆ'ಯ 'ಬಿ' ಹಾಗೂ 'ಸಿ' ಕಂಪನಿಗಳಿಗೆ ಸಿಬ್ಬಂದಿ ಹುದ್ದೆಗಳನ್ನು ಸೃಜಿಸುವ ಕುರಿತು.

ಓದಲಾಗಿದೆ:-

1. ಸರ್ಕಾರದ ಆದೇಶ ಸಂಖ್ಯೆ: ಒಇ 183 ಕಅಸೇ 2012, ದಿ: 14-06-2013.
2. ಸರ್ಕಾರದ ಆದೇಶ ಸಂಖ್ಯೆ: ಒಇ 100 ಕಅಸೇ 2013, ದಿ: 28-01-2014.
3. ಸರ್ಕಾರದ ಆದೇಶ ಸಂಖ್ಯೆ: ಒಇ 132 ಕಅಸೇ 2012, ದಿ: 16-07-2014.
4. ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆ ಮುಖ್ಯಸ್ಥರು, ಬೆಂಗಳೂರು ರವರ ಪತ್ರ ಸಂಖ್ಯೆ:ಎಸ್‌ಡಿಆರ್‌ಎಫ್/35/ಡಿಜಿಪಿ/2014-15, ದಿನಾಂಕ: 15-12-2014, 09-06-2015 ಮತ್ತು 24-09-2015.

** ^^ **

ಪ್ರಸ್ತಾವನೆ:-

ಮೇಲೆ ಓದಲಾದ (1) ರ ಆದೇಶದಲ್ಲಿ ಈ ಕೆಳಕಂಡ ರಾಜ್ಯ ವಿಪತ್ತು ಸ್ಪಂದನಾ ಪಡೆಗಳನ್ನು 2013-15ನೇ ಸಾಲಿನ ಅವಧಿಯಲ್ಲಿ ರಚಿಸಲು ಸರ್ಕಾರವು ಮಂಜೂರಾತಿಯನ್ನು ನೀಡಿತ್ತು.

1. ಎಸ್‌ಡಿಆರ್‌ಎಫ್ 'ಎ' ಕಂಪನಿ - ತರಬೇತಿ ಕೇಂದ್ರ / ನಗರ ವಿಪತ್ತು ಸ್ಪಂದನಾ ಪಡೆ, ಬೆಂಗಳೂರು ಕೇಂದ್ರ ಸ್ಥಾನ.
2. ಎಸ್‌ಡಿಆರ್‌ಎಫ್ 'ಬಿ' ಕಂಪನಿ - ಮಂಗಳೂರು ಕೇಂದ್ರ ಸ್ಥಾನ.
3. ಎಸ್‌ಡಿಆರ್‌ಎಫ್ 'ಸಿ' ಕಂಪನಿ - ಬೆಳಗಾವಿ ಕೇಂದ್ರ ಸ್ಥಾನ.
4. ಎಸ್‌ಡಿಆರ್‌ಎಫ್ 'ಡಿ' ಕಂಫನಿ - ಕಲಬುರಗಿ ಕೇಂದ್ರ ಸ್ಥಾನ.

ಮೇಲೆ ಓದಲಾದ (2) ರ ಆದೇಶದಲ್ಲಿ ರಾಜ್ಯ ವಿಪತ್ತು ಸ್ಪಂದನಾ ಪಡೆಗೆ (ಎಸ್.ಡಿ.ಆರ್.ಎಫ್) Rotation Basis ಆಧಾರದಲ್ಲಿ ಎರವಲು ಸೇವೆಯ ಮೇಲೆ 84 ಹುದ್ದೆಗಳನ್ನು ನಿಯೊಜಿಸುವ ಷರತ್ತಿಗೊಳಪಟ್ಟು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಗೆ ವಿವಿಧ ವೃಂದದ 84 ಹುದ್ದೆಗಳನ್ನು ಸೃಜಿಸಲು ಸರ್ಕಾರವು ಮಂಜೂರಾತಿಯನ್ನು ನೀಡಿತ್ತು.

ತದನಂತರ, ಮೇಲೆ ಓದಲಾದ (3) ರ ಆದೇಶದಲ್ಲಿ ರಾಜ್ಯ ವಿಪತ್ತು ಸ್ಪಂದನಾ ಪಡೆಯ 'ಎ' ಕಂಪನಿಗೆ ವಿವಿಧ ವೃಂದದ 127 ಹುದ್ದೆಗಳನ್ನು ಸೃಜಿಸಲಾಗಿತ್ತು.

ಮೇಲೆ ಓದಲಾದ (4) ರ ಪತ್ರದಲ್ಲಿ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಯ ಮುಖ್ಯಸ್ಥರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಈಗಾಗಲೇ, ರಾಜ್ಯ ವಿಪತ್ತು ಸ್ಪಂದನಾ ಪಡೆಯ 'ಎ' ಕಂಪನಿಯನ್ನು ಬೆಂಗಳೂರು ನಲ್ಲಿ ಪ್ರಾರಂಭಿಸಲಾಗಿದ್ದು, ಸಿಬ್ಬಂದಿಯವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 2015-16 ನೇ ಸಾಲಿನಲ್ಲಿ ರಾಜ್ಯ ವಿಪತ್ತು ಸ್ಪಂದನಾ ಪಡೆಯ 'ಬಿ' ಹಾಗೂ 'ಸಿ' ಕಂಪನಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ. 'ಬಿ' ಹಾಗೂ 'ಸಿ' ಕಂಪನಿಗಳಿಗೆ ಅವಶ್ಯವಿರುವ 254 (127+127) ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಬೇಕಾಗಿರುತ್ತದೆ ಅದರ ವಿವರ ಈ ಕೆಳಕಂಡಂತೆ ಇರುತ್ತದೆ.

...2

Scanned with CamScanner

Scanned with CamScanner

| ಕ್ರಸಂ | ಹುದ್ದೆ (ವೃಂದವಾರು) | ನಿಯೋಜನೆಯ ಮೇರೆಗೆ | | | ಒಂದು ಕಂಪನಿಗೆ | ಎರಡು ಕಂಪನಿಗೆ |
|---|---|---|---|---|---|---|
| | ಮೆಡಿಕಲ್ ಆಫೀಸರ್ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | | 01 | 01 | 02 |
| | | ಕೆಎಸ್‌ಐಎಸ್‌ಎಫ್ | ಕೆಎಸ್‌ಆರ್‌ಪಿ | ಅಗ್ನಿಶಾಮಕ ಇಲಾಖೆ | | |
| 1 | ಡೆಪ್ಯೂಟಿ ಕಮಾಂಡೆಂಟ್ (ಕಂಪನಿ ಕಮಾಂಡರ್) | – | 01 | – | 01 | 02 |
| 2 | ಇನ್ಸ್‌ಪೆಕ್ಟರ್ (2-I/C) | – | 01 | – | 01 | 02 |
| 3 | ಇನ್ಸ್‌ಪೆಕ್ಟರ್ ಜೆಡಿ – ಟೀಮ್ ಕಮಾಂಡರ್ | 03 | – | – | 03 | 06 |
| 4 | ಸಬ್ ಇನ್ಸ್‌ಪೆಕ್ಟರ್ ಜೆಡಿ | 07 | – | – | 07 | 14 |
| 5 | ಸಬ್ ಇನ್ಸ್‌ಪೆಕ್ಟರ್ (ಇಂಜಿನಿಯರಿಂಗ್ ಸ್ಕಿಲ್) | – | 06 | – | 06 | 12 |
| 6 | ಸಬ್ ಇನ್ಸ್‌ಪೆಕ್ಟರ್ – ಆರ್‌ಟಿ | – | 03 | – | 03 | 06 |
| 7 | ಹೆಚ್.ಸಿ/ಎಲ್.ಎಫ್.ಎಂ – ಜೆಡಿ | 04 | 04 | 02 | 10 | 20 |
| 8 | ಹೆಚ್.ಸಿ/ಎಲ್.ಎಫ್.ಎಂ – ಆರ್‌ಟಿ | [illegible] | 02 | 01 | 03 | 06 |
| 9 | ಹೆಚ್.ಸಿ/ಎಲ್.ಎಫ್.ಎಂ – ಎಲೆಕ್ಟ್ರಿಕಲ್ | [illegible] | 06 | 03 | 09 | 18 |
| 10 | ಹೆಚ್.ಸಿ/ಎಲ್.ಎಫ್.ಎಂ – ಟೆಕ್ನಿಕಲ್ | – | 02 | 01 | 03 | 06 |
| 11 | ಕಾನ್ಸ್‌ಟೇಬಲ್/ಎಫ್.ಎಂ-ಜೆಡಿ | 29 | 21 | 11 | 61 | 122 |
| 12 | ಹೆಚ್.ಸಿ/ಎಲ್.ಎಫ್.ಎಂ – ಡ್ರೈವರ್ಸ್ | 01 | 02 | 01 | 04 | 08 |
| 13 | ಕಾನ್ಸ್‌ಟೇಬಲ್/ಎಫ್.ಎಂ– ಡ್ರೈವರ್ಸ್ | 03 | 04 | 02 | 09 | 18 |
| 14 | ಫಾಲೋಯರ್ಸ್ | 03 | 03 | – | 06 | 12 |
| | ಒಟ್ಟು | 50 | 55 | 21 | 127 | 254 |

ಮೇಲ್ಕಂಡ ಹುದ್ದೆಗಳು ನಿಯೋಜನಾ ಹುದ್ದೆಗಳಾಗಿರುವುದರಿಂದ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ) ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಗೆ ನಿಯೋಜನಾ ಮೀಸಲು ಹುದ್ದೆಗಳಾಗಿದ್ದು, ಈ ನಾಲ್ಕು ಇಲಾಖೆಗಳಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುತ್ತದೆ. ರಾಜ್ಯ ವಿಪತ್ತು ಸ್ಪಂದನಾ ಪಡೆಗೆ ನಿಯೋಜನೆಯಿಂದ ಉಂಟಾಗುವ ರಿಕ್ತ ಸ್ಥಾನಗಳನ್ನು ಈ ನಾಲ್ಕು ಇಲಾಖೆಗಳು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಬಹುದಾಗಿರುತ್ತದೆ. ಆದ್ದರಿಂದ ರಾಜ್ಯ ವಿಪತ್ತು ಸ್ಪಂದನಾ ಪಡೆಯ 'ಬಿ' ಹಾಗೂ 'ಸಿ' ಕಂಪನಿಗಳಿಗೆ ಅವಶ್ಯವಿರುವ 254 ಹುದ್ದೆಗಳನ್ನು ಸೃಜಿಸಿ ಆದೇಶ ಹೊರಡಿಸಲು ಕೋರಿದ್ದಾರೆ.

...3

Scanned with CamScanner

Scanned with CamScanner

ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಯ ಮುಖ್ಯಸ್ಥರು ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಒಇ 01 ಕಅಸೇ 2015, ದಿನಾಂಕ: 12-02-2016</u>**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನಲೆಯಲ್ಲಿ, ರಾಜ್ಯ ವಿಪತ್ತು ಸ್ಪಂದನಾ ಪಡೆಗೆ 'ಬಿ' ಹಾಗೂ 'ಸಿ' ಕಂಪನಿಗಳಿಗೆ ತಲಾ ಒಂದು ಕಂಪನಿಗೆ 27 ಹುದ್ದೆಗಳಂತೆ ಒಟ್ಟು ಎರಡು ಕಂಪನಿಗಳಿಗೆ ವಿವಿಧ ವೃಂದದ 54 ಹುದ್ದೆಗಳನ್ನು ಸೃಜಿಸಲು ಸರ್ಕಾರವು ಮಂಜೂರಾತಿ ನೀಡಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 100 ಕಅಸೇ 2013, ದಿನಾಂಕ: 28-01-2014 ರ ಆದೇಶದಲ್ಲಿ (ಎರಡು ಇಲಾಖೆಗಳ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸ್ಪಷ್ಟತೆಯನ್ನು ಕಾಯ್ದುಕೊಳ್ಳಲು) ರಾಜ್ಯ ವಿಪತ್ತು ಸ್ಪಂದನಾ ಪಡೆಗೆ (ಎಸ್.ಡಿ.ಆರ್.ಎಫ್) Rotation Basis ಆಧಾರದಲ್ಲಿ ಎರವಲು ಸೇವೆಯ ಮೇಲೆ 84 ಹುದ್ದೆಗಳನ್ನು ನಿಯೋಜಿಸುವ ಷರತ್ತಿಗೊಳಪಟ್ಟು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಗೆ ವಿವಿಧ ವೃಂದದ 84 ಹುದ್ದೆಗಳನ್ನು ಸೃಜಿಸಲು ನೀಡಿರುವ ಮಂಜೂರಾತಿ ಆದೇಶವನ್ನು ರದ್ದು ಪಡಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 339 ವೆಚ್ಚ-11/2015, ದಿನಾಂಕ: 02-02-2016 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(signature) 12/2/16
(ಬಿ.ಎನ್.ದೇವರಾಜ್.)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),
ಒಳಾಡಳಿತ ಇಲಾಖೆ,
(ಪೊಲೀಸ್ ಸಹಾಯಕ ಸೇವೆಗಳು)

ಇವರಿಗೆ,

1) ಪ್ರಧಾನ ಮಹಾ ಲೇಖಪಾಲರು(ಜಿ&ಎಸ್.ಎಸ್.ಎ), (ಇ&ಎಸ್.ಎಸ್.ಎ) ಮತ್ತು (ಎ&ಇ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
2) ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಯ ಮುಖ್ಯಸ್ಥರು. ನಂ.1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ, ಬೆಂಗಳೂರು.
3) ಜಂಟಿ ನಿರ್ದೇಶಕರು / ಉಪ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4) ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಿ.ಎಸ್) ರವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಉಪ ಕಾರ್ಯದರ್ಶಿ (ಪೊಲೀಸ್ ಸಹಾಯಕ ಸೇವೆಗಳು) ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-11, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಅಧೀನ ಕಾರ್ಯದರ್ಶಿ, (ಸಮನ್ವಯ), ಒಳಾಡಳಿತ ಇಲಾಖೆ ವಿಧಾನ ಸೌಧ,

Scanned with CamScanner